4 ದೇವದಾಸಿ ಪದ್ಧತಿಯನ್ನು ಪೂರ್ಣವಾಗಿ ತಡೆಗಟ್ಟಲು ಜನಜಾಗೃತಿ ಕಾರ್ಯಕ್ರಮ ಹಾಗೂ ಜಾತ್ರೆ, ಉತ್ಸವಗಳಲ್ಲಿ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ

5 ದೇವದಾಸಿಯವರು ಹೊಂದಿರುವ ನಿವೇಶನವನ್ನು ಪರಿಶೀಲಿಸಿ ಈ ವರ್ಷ 15,000 ಮನೆಗಳನ್ನು ನಿರ್ಮಾಣ ಮಾಡಲು ತೀರ್ಮಾನಿಸಿದ್ದು, ಇದುವರೆಗೆ 10,634 ದೇವದಾಸಿ ಮಹಿಳೆಯರು ನಿವೇಶನ ಹೊಂದಿದ್ದು, ಇವರುಗಳಿಗೆ ಮನೆ ನಿರ್ಮಾಣ ಮಾಡಲು ಕರ್ನಾಟಕ ಗೃಹ ಮಂಡಳಿಯಿಂದ ಕ್ರಮ ಕೈಗೊಳ್ಳಲಾಗಿದೆ

ಆ) 2005–06ನೇ ಸಾಲಿನಲ್ಲಿ ದೇವದಾಸಿಯರ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ಕಾದಿರಿಸಿದ್ದ ಹಣ ರೂ 80 00 ಲಕ್ಷ ಖರ್ಚು ಮಾಡಿರುವ ಹಣ ರೂ 129 76 ಲಕ್ಷ

ಇ) ಪರಿಶೀಲನೆಯಲ್ಲಿದೆ

572(1071) ಶ್ರೀ ಆಂಜನೇಯ ಹೆಚ್. (ಭರಮಸಾಗರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಯಾವ ಯಾವ ಇಲಾಖೆಗಳಲ್ಲಿ ಯಾವ ಯಾವ ವೃಂದದ ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇವೆ?

ಆ) ಈವರೆವಿಗೂ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ?

ಇ) ಇನ್ನೂ ಭರ್ತಿ ಮಾಡಬೇಕಾಗಿರುವ ಹುದ್ದೆಗಳು ಎಷ್ಟು, ಯಾವಾಗ ಭರ್ತಿ ಮಾಡಲಾಗುವುದು?

ಈ) ಹಾಗಿದ್ದಲ್ಲಿ, ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದಿರುವ ಇಲಾಖೆಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು (ಪೂರ್ಣ ವಿವರ ಒದಗಿಸುವುದು)?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು):

ಅ) ಸರ್ಕಾರದ ಕೆಳಕಂಡ ಇಲಾಖೆಗಳಲ್ಲಿ 13 ಹುದ್ದೆಗಳು ಖಾಲಿ ಇದ್ದು ಭರ್ತಿ ಮಾಡಬೇಕಾಗಿರುತ್ತದೆ

ಕ್ರ. ಸಂ	ಇಲಾಖೆಯ ಹೆಸರು	ಪ್ರಕಟಣೆ	ಬಾಕಿ ಇರುವ ಹುದ್ದೆಗಳ ವಿವರ	ಹುದ್ದೆಗಳ ಹೆಸರು
		ಪ ಜಾತಿ	ಪ ವರ್ಗ	
1	ಕೃಷಿ ಮಾರಾಟ ಇಲಾಖೆ	1	0	ಶೀಘ್ರಲಿಪಿಗಾರರು
2	ಕರ್ನಾಟಕ ಭವನ	1	0	ಗ್ರೂಪ್–ಡಿ
3	ನಿವಾಸಿ ಆಯುಕ್ತರ ಕಚೇರಿ	1	0	ಸಿ ಸಿ ಟಿ/ಜೆ ಎ
4	ಬಂದರು ಮತ್ತು ಒಳಸಾರಿಗೆ ಇಲಾಖೆ	1	2	ಬಂದರು ಅಧಿಕಾರಿ ಮತ್ತು ಕಿರಿಯ ಜಲ ಮೋಜಣಿದಾರರು
5	ಶಿಕ್ಷಣ ಇಲಾಖೆ (ಅನುದಾನಿತ ಪ್ರೌಢ ಶಾಲೆಗಳು)	7	0	ಪ್ರೌಢಶಾಲಾ ಶಿಕ್ಷಕರು
	ಒಟ್ಟು	**11**	**2**	

ಆ) ಈವರೆವಿಗೂ 69 ವಿವಿಧ ಸರ್ಕಾರಿ ಇಲಾಖೆಗಳಲ್ಲಿ 13138 ವಿವಿಧ ವೃಂದಗಳ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಡಿಸೆಂಬರ್ 2006ರವರೆಗೂ ಒಟ್ಟು 10255 ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಸರ್ಕಾರಿ ಇಲಾಖೆಗಳಲ್ಲಿ (69 ಇಲಾಖೆ) ಒಟ್ಟು 13138 ಹುದ್ದೆಗಳನ್ನು ಗುರುತಿಸಲಾಗಿದ್ದು, ಇವುಗಳಲ್ಲೂ 10975 ಹುದ್ದೆಗಳಿಗೆ ನೇಮಕಾತಿಗಾಗಿ ಪ್ರಕಟಣೆ ಹೊರಡಿಸಲಾಗಿದೆ ಪ್ರಕಟಣೆ ಹೊರಡಿಸಲಾಗಿರುವ ಹುದ್ದೆಗಳಲ್ಲಿ ಒಟ್ಟು 10255 ಅಭ್ಯರ್ಥಿಗಳನ್ನು ನೇಮಕಾತಿ ಮಾಡಲಾಗಿದೆ ಇನ್ನೂ 294 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಬೇಕಾಗಿದೆ

ಗುರುತಿಸಲಾಗಿರುವ ಹುದ್ದೆಗಳಲ್ಲಿ 2150 ಹುದ್ದೆಗಳನ್ನು ಮುಂದೆ ಭರ್ತಿ ಮಾಡಲಾಗುವ ಹುದ್ದೆಗಳೆಂದು ವರ್ಗೀಕರಿಸಲಾಗಿದೆ ಪ್ರಕಟಣೆಗೆ 13 ಹುದ್ದೆಗಳು ಮಾತ್ರ ಬಾಕಿ ಇರುತ್ತದೆ

ಇ) ಇಲಾಖೆಗಳಲ್ಲಿನ ಉಳಿದ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ ಪ್ರಕಟಣೆಗೆ ಬಾಕಿ ಇರುವ 13 ಹುದ್ದೆಗಳಿಗೆ ಶೀಘ್ರದಲ್ಲೇ ನೇಮಕಾತಿ ಮಾಡುವಂತೆ

ಸಂಬಂಧಿಸಿದ ಇಲಾಖೆಗಳಿಗೆ ಸಚಿವ ಸಂಪುಟ ಉಪ ಸಮಿತಿಯು ಸೂಚನೆ ನೀಡಿರುತ್ತದೆ

ಈ) ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಯಲ್ಲಿ ಕೆಲವು ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಹಲವಾರು ತಾಂತ್ರಿಕ ಕಾರಣಗಳಿಂದಾಗಿ ವಿಳಂಬವಾಗಿದ್ದು, ಈಗ ಭರ್ತಿ ಕಾರ್ಯವು ನಡೆಯುತ್ತಿದೆ ಭರ್ತಿ ಮಾಡದೆ ಇರುವ ಯಾವುದೇ ಇಲಾಖೆಯು ಇಲ್ಲದಿರುವುದರಿಂದ ಕ್ರಮದ ಪ್ರಶ್ನೆ ಉದ್ಭವಿಸುವುದಿಲ್ಲ

573(473) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೆಚ್‌ಐವಿ/ಏಡ್ಸ್ ಸೋಂಕಿತ ರೋಗಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು) ?

ಆ) ಇಂತಹ ಮಾರಕ ರೋಗಗಳನ್ನು ತಡೆಯಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಇ) ಇಂತಹ ರೋಗಿಗಳಿಗೆ ಯಾವ ರೂಪದ ಚಿಕಿತ್ಸೆ ಶುಶ್ರೂಷೆ ನೀಡಲಾಗುವುದು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 1987 ರಿಂದ ಡಿಸೆಂಬರ್ 2006 ರವರೆಗೆ ಹೆಚ್‌ಐವಿ/ಏಡ್ಸ್ ಸೋಂಕಿತ ರೋಗಿಗಳ ಸಂಖ್ಯೆ 10695 ಜಿಲ್ಲಾವಾರು ವಿವರವನ್ನು ನೀಡಲಾಗಿದೆ (ಅನುಬಂಧ–1)

ಆ) ಕೈಗೊಂಡ ಕ್ರಮಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ

ಇ)1 ಹನ್ನೆರಡು ಏ ಆರ್ ಟಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಅವುಗಳಲ್ಲಿ ಏಡ್ಸ್ ರೋಗಗಳಿಗೆ ಆಂಟಿ ರಿಟ್ರೋ ವೈರಲ್ ಚಿಕಿತ್ಸೆ ಮತ್ತು ರಕ್ತದಲ್ಲಿನ ಸಿ ಡಿ 4 ಕಣಗಳ ಪರೀಕ್ಷೆ ಸೌಲಭ್ಯ ಒದಗಿಸಲಾಗುತ್ತಿದೆ

2 ಒಂಭತ್ತು ಆರೈಕೆ ಮತ್ತು ಬೆಂಬಲ ನೀಡುವ ಕೇಂದ್ರಗಳಲ್ಲಿ ಏಡ್ಸ್ ರೋಗಿಗಳಿಗೆ ಆರೈಕೆ ಮತ್ತು ನೈತಿಕ ಬೆಂಬಲ ನೀಡಲಾಗುತ್ತಿದೆ

3 ಹೆಚ್‌ಐವಿ ಸೋಂಕಿತನೊಂದಿಗೆ ಜೀವಿಸುತ್ತಿರುವ ಮಕ್ಕಳಿಗಾಗಿ (15 ವರ್ಷಕ್ಕಿಂತ ಕೆಳಗಿನವರು) ಪ್ರಥಮ ಬಾರಿಗೆ ಬೆಂಗಳೂರಿನ